C.C. No.- 6700/2025
CW-8/ PW-4

ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ
(ಸಂಚಾರಿ ನ್ಯಾಯಾಲಯ) ಕಾರಟಗಿ.
ಸಾಕ್ಷಿಯನ್ನು ದಿನಾಂಕ- **23.02.2026** ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.

ಪಾಟೀ ಸವಾಲುಃ ಆರೋಪಿಯ ಪರ ಶ್ರೀ ಹೆಚ್.ಬಿ.ಎ ವಕೀಲರಿಂದಃ

1. ಚಾಸಾ-1 ಮತ್ತು 6 ನನಗೆ ಗೊತ್ತು. ಅವರು ನಮ್ಮ ಓಣಿಯಲ್ಲಿ ಇರುತ್ತಾರೆ. ನಾವೆಲ್ಲರೂ ಒಂದೇ ಜಾತಿಯವರು. ಸುಮಾರು 6 ತಿಂಗಳ ಕೆಳಗೆ ಪ್ರಕರಣದ ಸಂಬಂಧ ಠಾಣೆಗೆ ಹೋಗಿರುತ್ತೇನೆ. ಠಾಣೆಗೆ ಹೋಗಲು ಪೋಲಿಸರು ನನಗೆ ನೋಟಿಸ್ ನೀಡಿರುತ್ತಾರೆ. ನಾನು ಠಾಣೆಗೆ ಹೋದಾಗ ಚಾಸಾ-6 ಹಾಗೂ ಆರೋಪಿಯು ಸಹ ಇದ್ದರು. ಆಗ ಸಮಾರು ಮಧ್ಯಾಹ್ನ 3-30 ಗಂಟೆ ಆಗಿತ್ತು. ಠಾಣೆಯಿಂದ ನನ್ನ ಮನೆ ಒಂದುವರೆ ಕಿ.ಮೀ ಅಂತರವಿದೆ. ನನ್ನ ಮನೆಯಿಂದ ಠಾಣೆಗೆ ಪೋಲಿಸ್ ವಾಹನದಲ್ಲಿ ಹೋಗಿರುತ್ತೇನೆ. ಆದರೇ ಅದರ ನಂಬರ್ ಗೊತ್ತಿಲ್ಲ. ಆರೋಪಿಯ ಬಗ್ಗೆ ನಿಮಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ಆತನೇ ಕಳ್ಳ ಆತನ ಹೆಸರು ರಹೀಂ ಎಂದು ನುಡಿಯುತ್ತಾರೆ. ನಿಪಿ-5 ರಲ್ಲಿ ಬರೆದ ವಿಷಯ ನಿಮಗೆ ಗೊತ್ತಿಲ್ಲ ಸಾಕ್ಷಿಯು ನನಗೆ ಓದಲು ಬರುವುದಿಲ್ಲ, ಅದರೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-5 ನ್ನು ಪೋಲಿಸರ ಹೇಳಿಕೆಯ ಮೇರೆಗೆ ಸಹಿ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಹಣ ತೆಗೆದುಕೊಂಡ ಬಗ್ಗೆ ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-5 ನ್ನು ಪೋಲಿಸರು ನನಗೆ ಓದಿ ಹೇಳಿರುವುದಿಲ್ಲ. ನಿಪಿ-5 ನ್ನು ನಾನು ಹೇಳಿ ಬರೆಸಿರುವುದಿಲ್ಲ. ಹಾಗೂ ಯಾವ ಮುಖಬೆಲೆಯ ಹಣವನ್ನು ಆರೋಪಿ ನೀಡಿರುತ್ತಾನೆ ಎಂದು ಹೇಳಿ ಬರೆಸಿರುವುದಿಲ್ಲ. ನಿಪಿ-6 ಕ್ಕೆ ಪೋಲಿಸರ ಹೇಳಿಕೆಯ ಮೇರೆಗೆ ನಿಂತಿರುತ್ತೇನೆ. ಅದು ಯಾವ ಕಾರಣಕ್ಕೆ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಈ ದಿನ ನ್ಯಾಯಾಲಯಕ್ಕೆ ನಾನು ಚಾಸಾ-1 ಮತ್ತು 6 ರವರೊಂದಿಗೆ ಒಂದೇ ವಾಹನದಲ್ಲಿ ಬಂದಿರುತ್ತೇನೆ. ಚಾಸಾ-1 ರವರ ಹೇಳಿಕೆಯ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನನ್ನ ಸಮಕ್ಷಮ ಯಾವುದೇ ಪಂಚನಾಮೆ ಆಗದಿದ್ದರೂ ಸಹ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಅನುಕೂಲವಾಗುವಂತೆ ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ

ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋದಾಗ ನನ್ನ ಅಂಗಜಪ್ತಿಯನ್ನು ಮಾಡಿರುವುದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ.
(ಸಂಚಾರಿ ನ್ಯಾಯಾಲಯ ಕಾರಟಗಿ)